3

# ಯೇಸು, ದೇವದೂತರು ಹಾಗೂ ನಾವು

## (1:4-14)

ಇಬ್ರಿಯ 1:4ನ್ನು ಸಂಕ್ಷಿಪ್ತವಾಗಿ ಗಮನಿಸಿದೆವು, ಈ ಭಾಗದಲ್ಲಿ, "ಯೇಸು ದೇವದೂತರಿಗಿಂತಲೂ ಶ್ರೇಷ್ಟನು" ಎಂಬುದಾಗಿದೆ. ಅಧ್ಯಾಯದ ಮುಂದಿನ ಭಾಗದಲ್ಲಿ ಯೇಸು ಮತ್ತು ದೇವದೂತರ ನಡುವಿನ ಹೋಲಿಕೆಯ ಮುಖಾಂತರ ನಾವು ಸಂದೇಶವನ್ನು ನೋಡಲಿದ್ದೇವೆ.

### ದೂತರು

ಈ ದೂತರು ಯಾರು ಅವರು ಏನು ಮಾಡುವರು ಎಂಬ ವಿಚಾರದಲ್ಲಿ, ಜನರಲ್ಲಿ ಕುತೂಹಲಕಾರಿಯಾದ ತರ್ಕಗಳು ಉಂಟಾಗಿವೆ. ಇಬ್ರಿಯರ ಪತ್ರಿಕೆಯಲ್ಲಿ ಅನೇಕ ಬಾರಿ ದೂತರ ಕುರಿತು ತಿಳಿಸಲಾಗಿದೆ. ನಮ್ಮ ಪಾಠದ ಸಂಗಡ ಅಧ್ಯಾಯ 2 ರಲ್ಲಿಯೂ ದೂತರ ಕುರಿತು ತಿಳಿಸಲಾಗಿ (ವಚನಗಳು 2, 5, 7, 9, 16). ಈ ಪುಸ್ತಕದ ಅಂತ್ಯದಲ್ಲಿ ದೂತರ ಕುರಿತ ಎರಡು ಚಿತ್ರಣಗಳನ್ನೂ ನೀಡಲಾಗಿದೆ (12:22; 13:2).

1:14ರಲ್ಲಿ, ದೂತರ ಕುರಿತ ವಿಶೇಷ ಹೇಳಿಕೆಯಿದೆ: "ಇವರೆಲ್ಲರು ರಕ್ಷಣೆಯನ್ನು ಬಾಧ್ಯವಾಗಿ ಹೊಂದಬೇಕಾಗಿರುವವರ ಸೇವೆಗೋಸ್ಕರ ಕಳುಹಿಸಲ್ಪಡುವ ಊಳಿಗದ ಆತ್ಮಗಳೆಲ್ಲವೋ?" ಕ್ರೈಸ್ತರಿಗೆ, ದೇವದೂತರಿಂದ ಆಗುವ ನಿರ್ಧಿಷ್ಟವಾದ ಕಾರ್ಯಗಳ ಕುರಿತು ಹೇಳಿರುವದಿಲ್ಲ. ಆದರೆ ದೇವರ ಸಹಾಯದಲ್ಲಿ ಅವರು ಒಳಗೊಂಡಿರುವರು.

### ಯೇಸು ಹಾಗೂ ದೂತರು

ದೂತರ ವಿಚಾರ ಆಶ್ಚರ್ಯವಾಗಿದ್ದರೂ, ಅವರನ್ನು ಯೇಸುವಿಗೆ ಹೋಲಿಕೆ ಮಾಡಲಾಗುವದಿಲ್ಲ; ನಮ್ಮ ಪಾಠದ ಮುಖ್ಯ ತಾತ್ಪರ್ಯ ಇದೇ ಆಗಿದೆ. ಕ್ರಿಸ್ತನು, ದೇವದೂತರಿಗಿಂತ ಶ್ರೇಷ್ಟನು ಎಂಬುದನ್ನು ಬರಹಗಾರನು ತಿಳಿಸಿರುವನು: 1:4-14ರಲ್ಲಿ, ಹಳೆಯ ಒಡಂಬಡಿಕೆಯಲ್ಲಿರುವ ಏಳು ಪ್ರಶ್ನೆಗಳನ್ನು ಪ್ರಸ್ತಾಪಿಸಲಾಗಿದೆ, ಪ್ರಮುಖವಾಗಿ ಕೀರ್ತನೆಗಳಿಂದ ಉಲ್ಲೇಖಿಸಲಾಗಿದೆ. ದೂತರು ಸೇವಕರಾಗಿದ್ದು, ಕ್ರಿಸ್ತನು ಮಗನಾಗಿರುವನು ಎಂಬ ಅಂಶವನ್ನು ಎತ್ತಿ ಹಿಡಿಯಲಾಗಿದೆ. ಬರಹಗಾರನ ಆಲೋಚನೆ ಏನೆಂದರೆ:

(1) ಯೇಸು ಮಾತ್ರ ಪುತ್ರನ ಪದವಿಯನ್ನು ಹೊಂದಿರುವದರಿಂದ, *ಆತನು ದೂತರಿಗಿಂತಲೂ ಶ್ರೇಷ್ಟನು* (ವಚನಗಳು 4, 5). ಕೀರ್ತನೆ 2:7, ಮತ್ತು 2 ಸಮುವೇಲ 7:14ರಲ್ಲಿ, ಇದನ್ನು ಉಲ್ಲೇಖಿಸಿದೆ. ಇವೆರಡೂ ದಾವೀದನ ವಂಶಕ್ಕೆ ಸೀಮಿತವಾಗಿದೆ. ಅವುಗಳು ಕ್ರಿಸ್ತನಲ್ಲಿ ಅಂತ್ಯಗೊಳ್ಳುತ್ತವೆ.

(2) ದೂತರು ಸಹ ಯೇಸುವನ್ನು ಆರಾಧಿಸಬೇಕಿರುವದರಿಂದ, *ಯೇಸು ದೂತರಿಗಿಂತಲೂ ಶ್ರೇಷ್ಟನು* (ಕಡಿಮೆ ಮಟ್ಟದವರು, ಮೆಲ್ಮಟ್ಟದವನನ್ನು ಆರಾಧಿಸುವರು). ಸೆಪ್ಟಜೂಯಂಟಿನ ಧರ್ಮೋಪದೇಶಕಾಂಡ 32:43ರಲ್ಲಿನ, ಉಲ್ಲೇಖವನ್ನು ವಚನ 6ರಲ್ಲಿ ತಿಳಿಸಲಾಗಿದೆ. ಅದರ ಹಿನ್ನಲೆ ದೇವರೇ ಆಗಿದ್ದರೂ, ಬರಹಗಾರನು ಯೇಸುವನ್ನು ಕುರಿತು, "ಆತನು ದೇವರ ತತ್ವದ ಮೂರ್ತಿ" ಎಂದಿರುವನು (ಇಬ್ರಿಯ 1:3).

(3) ಯೇಸು, ದೂತರಿಗಿಂತಲೂ ಶ್ರೇಷ್ಟನು ಯಾಕೆಂದರೆ, ಮಗನು ಯುಗ

ಯುಗಾಂತರದಲ್ಲೂ ಆಳುವವನಾಗಿರುವದರಿಂದ, *ದೂತರ ಮಹತ್ವನ್ನು ಯೇಸುವಿನೊಂದಿಗೆ ಹೋಲಿಸಲಾಗದು* (ವಚನಗಳು 7-9). ಸೆಪ್ಟಜೂಯಂಟ್‌ನ ಕೀರ್ತನೆ 104:4ರ ಉಲ್ಲೇಖದ ವಾಕ್ಯವಾಗಿದೆ. ಮಗನ ವಾಕ್ಯವು (ವಚನಗಳು 8, 9) ಕೀರ್ತನೆಯಲ್ಲಿರುವದರಿಂದ (ಕೀರ್ತನೆ 45:6, 7) ಯೇಸುವಿನಲ್ಲಿ ಎಲ್ಲವೂ ನೆರವೇರಿರುತ್ತದೆ.

(4) ಯೇಸು ದೂತರಿಗಿಂತಲೂ ಶ್ರೇಷ್ಟನು ಕಾರಣವೇನೆಂದರೆ, *ಯೇಸುವೇ ಭೂಮಿಗೆ ಅಸ್ತಿವಾರ ಹಾಕಿದವನು* (ವಚನಗಳು 10-12); ಆದರೆ ದೂತರು ಯಾವದನ್ನು ಸೃಷ್ಟಿಸಲಿಲ್ಲ, ಆದರೆ ಸೃಷ್ಟಿಸಲ್ಪಟ್ಟವರಾಗಿದ್ದರು. ಕೀರ್ತನೆ 102:25-27ರಲ್ಲಿ ಇದು ದೇವರ ಕುರಿತಾದ ವಾಕ್ಯವಾಗಿದ್ದರೂ, ಬರಹಗಾರನು ಇದನ್ನು ಯೇಸುವಿಗೆ ಹೋಲಿಸಿ, ಆತನ ಮೂಲಕವೇ ಸಕಲವನ್ನು ಸೃಷ್ಟಿಸಿದನು ಎಂದಿರುವನು (ಇಬ್ರಿಯ 1:2).

(5) ಯೇಸು, ದೂತರಿಗಿಂತಲೂ ಶ್ರೇಷ್ಟನು ಏಕೆಂದರೆ, *ದೂತರು ಸೇವಕರಾಗಿದ್ದು, ಯೇಸು ಅವರ ಮೇಲೆ ಆಡಳಿತ ನಡೆಸುತ್ತಿದ್ದಾನೆ* (ವಚನಗಳು 13,14). ಕೀರ್ತನೆ 110:1 ರಲ್ಲಿ ಯೇಸು ಸಿಂಹಾಸನದಲ್ಲಿರುವನು ಎಂಬ ಪುರಾವೆಯನ್ನು ನೀಡಲಾಗಿದೆ. ಆದರೆ ದೂತರು ಊಳಿಗದ ಆತ್ಮಗಳಷ್ಟೆ (ಸೇವಕರು) ಎಂದು ಸಹಜ ತಿಳುವಳಿಕೆಯಾಗುತ್ತದೆ (ಇದರ ಚರ್ಚೆಯನ್ನು 2:5, ಮತ್ತು 2:1-4ರಲ್ಲಿ ಮುಂದುವರೆಸಲಾಗಿದೆ.)

## ಯೇಸು, ದೇವದೂತರು ಹಾಗೂ ನಾವುಗಳು

ಯೇಸುವನ್ನು ದೂತರಿಗಿಂತಲೂ ಶ್ರೇಷ್ಟನು ಎಂದು ಬರಹಗಾರನು ಏಕೆ ತಿಳಿಸಿರುವನು, ಮತ್ತು ಈ ವಿಚಾರದಿಂದ, ನಮಗೆ ಸಹಾಯವಾಗುವ ಅಂಶ ಯಾವದು? 2:1-4ರಲ್ಲಿ, ಬರಹಗಾರನು ಕಾರ್ಯರೂಪದ ಒಂದು ಅಂಶವನ್ನು ತೋರಿಸಿ, ಯೇಸು ದೂತರಿಗಿಂತಲೂ, ಶ್ರೇಷ್ಟನು ಎಂಬ ಗಮನ ಸೆಳೆದಿರುವನು (ವಚನಗಳು 2 ಮತ್ತು 3), ಅದರೊಂದಿಗೆ ಇತರೆ ಕೆಲವು ತತ್ವಗಳನ್ನು ತಿಳಿಸಲಾಗಿದೆ.

ಯೆಹೂದ್ಯರು, ದೂತರ ಕುರಿತು ಆಶ್ಚರ್ಯವುಳ್ಳವರಾಗಿ, ಅವರ ಅಧಿಕಾರವೇನು ಎಂದು ಕುತೂಹಲವುಳ್ಳವರಾಗಿದ್ದರು. ಆದಿ ಕ್ರೈಸ್ತರಲ್ಲಿ ಕೆಲವರು ದೂತರ ಕುರಿತು ಆಸಕ್ತಿವುಳ್ಳವ ರಾಗಿದ್ದರು. ಅದೇ ರೀತಿಯಲ್ಲಿ ಕೆಲವರು ದೂತರ ಆರಾಧನೆಯಲ್ಲಿ ಮುಂದಾಗಿದ್ದರು (ಕೊಲೊಸ್ಸೆ 2:18; ಪ್ರಕಟನೆ 19:10; 22:8, 9). ಹಾಗೂ 1 ನೇ ಅಧ್ಯಾಯದಲ್ಲಿ ಪುರಾತನ ಕಾಲದಲ್ಲಿ ದೇವರು ನಮ್ಮ ಪಿತೃಗಳೊಂದಿಗೆ ಮಾತನಾಡಿದನು, ಎಂದು ಉಲ್ಲೇಖಿಸಿ, ಆತನು ದೂತರಿಗಿಂತಲೂ ಶ್ರೇಷ್ಟನು ಎಂದಿರುವನು, ಮತ್ತು ಭಾಗ ಭಾಗ ವಾಗಿಯೂ, ವಿಧವಿಧವಾಗಿಯೂ ಮಾತನಾಡಿದನು ಎಂಬದರಲ್ಲಿ, ದೂತರ ಮೂಲಕ ಮಾತಾಡಿದನು ಎಂಬದು ಬಹುಶಃ ಒಂದು ವಿಧವಾ ಗಿರಬಹುದು. ಹಾಗೂ ದೇವರು ಅದನ್ನು ಈ ಅಂತ್ಯದ ದಿನಗಳಲ್ಲಿ ಪ್ರಕಟಪಡಿಸಿರುವನು ಎಂಬದೆ (1:2).

ಹಾಗೆಯೇ, ಯೇಸುವಿನ ಹೊಸ ಒಡಂಬಡಕೆಯು, ಹಳೆ ಒಡಂಬಡಿಕೆಗಿಂತ ಶ್ರೇಷ್ಟ ವಾಗಿದೆ (ಇಬ್ರಿಯ: ಮುಖ್ಯಾಂಶ), ಇದರಲ್ಲಿ ನಮಗೇನಾದರು ಸಂದೇಶವಿದೆಯೇ? ಈ ದಿನಗಳಲ್ಲೂ ಅನೇಕರು ದೂತರ ಕುರಿತು ಕೂತುಹಲ ಹೊಂದಿರುವರು. ಕೆಲವರು ವಿಚಿತ್ರವಾದ, ಅಥವಾ ವ್ಯತ್ಯಾಸವುಳ್ಳ ಸಂಗತಿಗಳಲ್ಲಿ ಸಹ ನಮ್ಮನ್ನು ಯೇಸುವಿನಿಂದ ದೂರಮಾಡಬಾರದು, ಆತನನ್ನು ನಾವು ಗೌರವಿಸಬೇಕು, ಆತನಿಗೆ ವಿಧೇಯರಾಗಬೇಕು! ಆತನು ಸಂತೈಸುವಿಕೆಯ ಹಾಗೂ ಉತ್ತೇಜನದ ಚಿಲುಮೆಯಾಗಿದ್ದಾನೆ!